SC:111/2021
PW:32 CW:52

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

ಹೇಳಿಕೆ ಹಾಳೆ
ಆರ್.ಪಿ. ಸಂಖ್ಯೆ57
ನಮೂನೆ ಸಂಖ್ಯೆ4
(ಸಿವಿಲ್)

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 111/2021

| | |
|---|---|
| PW | 32 |
| CW | 52 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 14.03.2025.

ಸಾಕ್ಷಿಯ ಹೆಸರು : ಕಿರಣ್ ಕೆ.ಎನ್
ತಂದೆಯ ಹೆಸರು : ಕೆ.ವಿ. ನಾರಾಯಣ
ವಯಸ್ಸು : 42 ವರ್ಷ
ಉದ್ಯೋಗ : ಕೆ.ಎಸ್.ಆರ್.ಟಿ.ಸಿ. ಕಂಡಕ್ಟರ್
ವಾಸಸ್ಥಳ : ಗೌರಿಬಿದನೂರು

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

1. ನನಗೆ ಮೃತ ವಿಶ್ವನಾಥ ಅವರ ಪರಿಚಯ ಇದ್ದು, ನಾನು ಕೆಳಗಿನ ಮನೆಯಲ್ಲಿ ಬಾಡಿಗೆಗೆ ಇದ್ದು, ವಿಶ್ವನಾಥ್ ಇವರು ಮೇಲ್ಭಾಗದ ಮನೆಯಲ್ಲಿ ವಾಸ ಇದ್ದರು. ನನಗೆ ಚಾಸಾ–1 ರವರ ಪರಿಚಯ ಇದ್ದು, ಉಳಿದ ಸಾಕ್ಷಿದಾರರ ಪರಿಚಯ ಇಲ್ಲ. ಈ ದಿನ ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರುಪಡಿಸಿದ 1 ಮತ್ತು 3 ನೇ ಆರೋಪಿತರ ಪರಿಚಯ ಇಲ್ಲ. ಅದೇ ರೀತಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 2 ಮತ್ತು 4 ನೇ ಆರೋಪಿತರ ಪರಿಚಯ ಇಲ್ಲ.

2. ಮೃತ ವಿಶ್ವನಾಥ್ ಇವರು ಸುಮಾರು 4 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ನಾನು ಸುಮಾರು 4 ವರ್ಷದ ಹಿಂದೆ ರಾತ್ರಿ 8.00 ಗಂಟೆಗೆ ನನ್ನ ಕರ್ತವ್ಯ ಮುಗಿಸಿ ಮನೆಗೆ ಬಂದಿರುತ್ತೇನೆ. ಆಗ ವಿಶ್ವನಾಥ್ ಇವರು ರಸ್ತೆಯ ಪಕ್ಕದಲ್ಲಿ ಹೋಗುತ್ತಿದ್ದು, ಎಲ್ಲಿಗೆ ಹೋಗುತ್ತಿದ್ದೀರ ಎಂದು ಕೇಳಿದಾಗ ಅವರು ಗಾಡಿ ತೆಗೆದುಕೊಂಡು ಬರಲು ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಸಿ.ಡಿ. ವಕೀಲರಿಂದಃ</u>**

3. ಆ ದಿನ ವಿಶ್ವನಾಥ್ ಇವರು ಯಾವ ರೀತಿ ಬಟ್ಟೆಗಳನ್ನು ಧರಿಸಿದ್ದರು ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ. ಆ ದಿನ ವಿಶ್ವನಾಥ್ ಇವರ ಬಳಿ ಮೊಬೈಲ್ ಇತ್ತೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನಾನು ರಾತ್ರಿ 8.00 ಗಂಟೆಗ ವಿಶ್ವನಾಥ್ ಇವರನ್ನು ಭೇಟಿ ಮಾಡಿದ ಎಷ್ಟು ದಿವಸಗಳ ನಂತರ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ನನಗೆ ತಿಳಿದಿಲ್ಲ. ನಾನು ಪ್ರತಿದಿನ ಬೆಳಗ್ಗೆ 5.00 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿ ರಾತ್ರಿ 7.00 ಗಂಟೆಗೆ ವಾಪಸ್ಸು ಮನೆಗೆ ಬರುತ್ತೇನೆ. ಆ ದಿನ ನನ್ನ ಕರ್ತವ್ಯ ಮುಗಿಸಿ ನೇರವಾಗಿ ನಮ್ಮ ಮನೆಗೆ ಬಂದಿರುತ್ತೇನೆ. ನನಗೆ ಆ ದಿನ ರಾತ್ರಿ 8.00 ಗಂಟೆಗೆ ವಿಶ್ವನಾಥ್ ಇವರು ಸಿಕ್ಕಿರಲಿಲ್ಲ, ನಾನು ಅವರನ್ನು ಏನನ್ನೂ ವಿಚಾರಿಸದೇ ಇದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಶ್ರೀ ಕೆ.ಎಸ್.ಎನ್ ವಕೀಲರ ಪರವಾಗಿ ಶ್ರೀ ಬಿ.ಎನ್.ಎಂ. ಹಾಗೂ ಶ್ರೀ ಜಿ.ಹೆಚ್.ಎಂ. ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 14.03.2025 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

**(ಎಸ್. ಶ್ರೀಧರ)**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.